ಈ) ಹೌದು. ಆಧುನಿಕ ತಂತ್ರಜ್ಞಾನದ (interpretation of satellite imagery and computing rainfall runoff relationship) ಮೂಲಕ ಪ್ರಾಥಮಿಕ ಸರ್ವೆ ಕಾರ್ಯದೊಂದಿಗೆ ತಾಂತ್ರಿಕ ನೆರವನ್ನು ಪಡೆಯಲಾಗಿದೆ. ಅಲ್ಲದೆ, ನುರಿತ ಇಂಜಿನಿಯರ್‌ರವರುಗಳಿಂದ ವಿವರವಾದ ಇಂಜಿನಿಯರಿಂಗ್ ಸರ್ವೆ ಕಾರ್ಯವನ್ನೂ ಸಹಾ ಕೈಗೊಂಡು ವಿವರವಾದ ಯೋಜನಾ ವರದಿಯನ್ನು ತಯಾರಿಸಲಾಗಿದೆ.

ತಿಪ್ಪಗೊಂಡನಹಳ್ಳಿ ಜಲಾಶಯಕ್ಕೆ ನೀರು ಸರಾಗವಾಗಿ ಹರಿಸುವ ಉದ್ದೇಶದಿಂದ ಮೇಲ್ಕಂಡ ಕಾಮಗಾರಿಯನ್ನು ಕಾವೇರಿ ನೀರಾವರಿ ನಿಗಮದಿಂದ ಕೈಗೊಳ್ಳಲಾಗಿದೆ.

ಸಣ್ಣ ಉದ್ದಿಮೆಗಳಿಗೆ ಪ್ರೋತ್ಸಾಹ

591 (191) ಶ್ರೀ ರಾಮಲಿಂಗಾರೆಡ್ಡಿ (ಬಿ.ಟಿ.ಎಂ. ಲೇಔಟ್) : ಮಾನ್ಯ ಸಣ್ಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಸಣ್ಣ ಕೈಗಾರಿಕೆಗಳ ಸಂಖ್ಯೆ ಎಷ್ಟು?

ಆ) ಸಣ್ಣ ಕೈಗಾರಿಕೆಗಳನ್ನು ಪ್ರಾರಂಭಿಸುವವರಿಗೆ ಸರ್ಕಾರ ನೀಡುವ ಸೌಲಭ್ಯಗಳೇನು;

ಇ) ನೋಂದಾಯಿತವಾಗಿರುವ ಎಷ್ಟು ಸಣ್ಣ ಕೈಗಾರಿಕೆಗಳು ರೋಗಗ್ರಸ್ತವಾಗಿವೆ; ಅದಕ್ಕೆ ಕಾರಣಗಳೇನು;

ಈ) ರಾಜ್ಯದಲ್ಲಿ ಸಣ್ಣ ಉದ್ದಿಮೆಗಳಿಗೆ ಮಾರುಕಟ್ಟೆ ಸೌಲಭ್ಯ ಒದಗಿಸಲು ಸರ್ಕಾರ ಕೈಗೊಂಡ ಕ್ರಮಗಳೇನು;

ಉ) ರಾಜ್ಯದಲ್ಲಿನ ಸಣ್ಣ ಕೈಗಾರಿಕೆಗಳ ಉತ್ಪನ್ನಗಳನ್ನು ಸರ್ಕಾರಿ ಕಚೇರಿಗಳು ಖರೀದಿಸಲು ಆದೇಶ ನೀಡಲಾಗಿದೆಯೇ;

ಊ) ರೋಗಗ್ರಸ್ತ ಉದ್ದಿಮೆಗಳನ್ನು ಪುನಶ್ಚೇತನಗೊಳಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ನರಸಿಂಹನಾಯಕ (ರಾಜುಗೌಡ) (ಸಣ್ಣ ಕೈಗಾರಿಕೆ ಸಚಿವರು) :

ಅ) 2012ರ ಜೂನ್ ಅಂತ್ಯಕ್ಕೆ ರಾಜ್ಯದಲ್ಲಿ ಒಟ್ಟು 4,39,245 ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳು ನೋಂದಾವಣೆಯಾಗಿರುತ್ತವೆ.

ಆ) ಕೈಗಾರಿಕೆಗಳನ್ನು ಸ್ಥಾಪಿಸುವವರಿಗೆ ಹಂಚಿಕೆ ಮಾಡಲು ರಾಜ್ಯದ ವಿವಿಧ ಭಾಗಗಳಲ್ಲಿ ಕೈಗಾರಿಕಾ ಮೂಲಭೂತ ಸೌಕರ್ಯಗಳನ್ನೊಳಗೊಂಡ ಕೈಗಾರಿಕಾ ನಿವೇಶನ/ಮಳಿಗೆಗಳನ್ನು ಕೈಗಾರಿಕಾ ಪ್ರದೇಶ ಮತ್ತು ಕೈಗಾರಿಕಾ ವಸಾಹತುಗಳಲ್ಲಿ ಕೆ.ಐ.ಎ.ಡಿ.ಬಿ. ಮತ್ತು ಕೆ.ಎಸ್.ಎಸ್.ಐ.ಡಿ.ಸಿ. ಅಭಿವೃದ್ಧಿಗೊಳಿಸಿದೆ. ಹೊಸ ಕೈಗಾರಿಕಾ ನೀತಿ 2009–14 ರಂತೆ ಸಣ್ಣ ಕೈಗಾರಿಕೆಗಳನ್ನು ಪ್ರಾರಂಭಿಸುವವರಿಗೆ ಈ ಕೆಳಕಂಡಂತೆ ಉತ್ತೇಜನ ಮತ್ತು ರಿಯಾಯಿತಿಗಳು ಲಭ್ಯವಿದೆ.

1. ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳಿಗೆ ರೂ.5.00 ಲಕ್ಷದಿಂದ ರೂ.35.00 ಲಕ್ಷದವರೆಗೆ ಉದ್ಯೋಗ/ಉತ್ಪಾದನೆ ಆಧಾರಿತ ಸಹಾಯಧನ ಮಂಜೂರಾತಿ.
2. ಕೈಗಾರಿಕೆಗಳು ಖರೀದಿಸುವ ನಿವೇಶನ/ಮಳಿಗೆ ಹಾಗೂ ಸಾಲದ ದಾಖಲಾತಿಗಳ ನೋಂದಣಿ ಶುಲ್ಕದಲ್ಲಿ ಶೇಕಡಾ 75 ರಿಂದ 100ರವರೆಗೆ ವಿನಾಯಿತಿ ಮತ್ತು ನೋಂದಣಿ ಶುಲ್ಕದಲ್ಲಿ ರಿಯಾಯಿತಿ.
3. ಸರ್ಕಾರದ ಇಲಾಖೆಗಳ ಖರೀದಿಯಲ್ಲಿ ಶೇಕಡ 15ರ ದರ ರಿಯಾಯ್ತಿ.
4. ಕೃಷಿ ಭೂಮಿ ಪರಿವರ್ತನಾ ಶುಲ್ಕದಲ್ಲಿ ಶೇಕಡಾ 75 ರಿಂದ 100ರವರೆಗೆ ವಿನಾಯಿತಿ.
5. ಪ್ರವೇಶ ತೆರಿಗೆ ವಿನಾಯಿತಿ.
6. ಆಹಾರ ಸಂಸ್ಕರಣಾ ಘಟಕಗಳಿಗೆ ಕೃಷಿ ಉತ್ಪನ್ನ ಮಾರುಕಟ್ಟೆ ತೆರಿಗೆಯಿಂದ ವಿನಾಯಿತಿ.
7. ಸೂಕ್ಷ್ಮ ಕೈಗಾರಿಕೆಗಳಿಗೆ ಶೇಕಡಾ 5 ರಷ್ಟು ಬಡ್ಡಿ ಸಹಾಯಧನ
8. ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳಿಗೆ ತಾಂತ್ರಿಕ ಉನ್ನತೀಕರಣದಡಿ ಐ.ಎಸ್.ಒ/ಬಿಐಎಸ್ ಪ್ರಮಾಣ ಪತ್ರಗಳನ್ನು ಪಡೆಯಲು, ಪೇಟೆಂಟ್ ನೋಂದಣಿಗಾಗಿ ಸಹಾಯಧನ
9. ಮಳೆ ಕೊಯ್ಲು, ಜಲ ಸಂರಕ್ಷಣೆ, ಶಕ್ತಿ ಸಂರಕ್ಷಣೆ ಅನುಸರಿಸುವ ಕೈಗಾರಿಕೆಗಳಿಗೆ ಸಹಾಯಧನ.
10. ರಫ್ತು ಆಧಾರಿತ ಘಟಕಗಳಿಗೆ ರಿಯಾಯಿತಿಗಳು

11. ತ್ಯಾಜ್ಯವಸ್ತು ಸಂಸ್ಕರಣಾ ಘಟಕಗಳಿಗೆ ರೂ.100 ಲಕ್ಷದ ವರೆಗೆ ಸಹಾಯಧನ.
12. ರೂ.10,000 ವರೆಗೂ ಯೋಜನಾ ವರದಿ ತಯಾರಿಸಲು ಸೂಕ್ಷ್ಮ ಕೈಗಾರಿಕೆಗಳಿಗೆ ಸಹಾಯಧನ.

ಇ) ರಾಜ್ಯದಲ್ಲಿ ಆರ್.ಬಿ.ಐ. ವರದಿ ಪ್ರಕಾರ 5910 ಘಟಕಗಳನ್ನು ರೋಗಗ್ರಸ್ತ ಎಂದು ಗುರುತಿಸಲಾಗಿದೆ.

ಕೈಗಾರಿಕೆಗಳು ರೋಗಗ್ರಸ್ತವಾಗಲು ಪ್ರಮುಖ ಕಾರಣಗಳೆಂದರೆ :

1. ಉದಾರೀಕರಣ
2. ಜಾಗತೀಕರಣ
3. ಬಹುರಾಷ್ಟ್ರೀಯ ಕಂಪನಿಗಳ ಪೈಪೋಟಿ
4. ಮಾಲೀಕರ ವಿವಾದಗಳು
5. ವಿಳಂಬ ಪಾವತಿ
6. ಮಾರುಕಟ್ಟೆ ಸಮಸ್ಯೆ
7. ವಿದ್ಯುತ್ ಸಮಸ್ಯೆ
8. ಸಾಕಷ್ಟು ದುಡಿಮೆ ಬಂಡವಾಳದ ಕೊರತೆ
9. ಇತರೆ ಸ್ಥಳೀಯ ಸಮಸ್ಯೆಗಳು.

ಈ) ಕರ್ನಾಟಕ ಪಾರದರ್ಶಕತೆ ಮತ್ತು ಖರೀದಿ ಕಾಯ್ದೆ, 2000 (ಕೆ.ಟಿ.ಪಿ.ಪಿ. ಕಾಯ್ದೆ, 2000) ಜಾರಿಯಾದಾಗಿನಿಂದ ಎಲ್ಲಾ ಖರೀದಿಗಳನ್ನೂ ಸದರೀ ಕಾಯಿದೆಯಡಿ ರೂಪಿಸಲಾದ ನಿಯಮಗಳನುಸಾರ ಮಾಡಲಾ ಗುತ್ತಿದೆ. ಆದಾಗ್ಯೂ, ಕೈಗಾರಿಕಾ ನೀತಿ 2009–14ರನ್ವಯ, ರಾಜ್ಯದ ಸಣ್ಣ ಕೈಗಾರಿಕಾ ಘಟಕಗಳು ಉತ್ಪಾದಿಸುವ ಉತ್ಪನ್ನಗಳಿಗೆ ಶೇಕಡ 15 ರಷ್ಟು ದರ ಆಧ್ಯತೆಯನ್ನು ಸರ್ಕಾರದ ಇಲಾಖೆಗಳ ಖರೀದಿಗೆ ಮಾತ್ರ ಸೀಮಿತಗೊಳಿಸಿ ಪ್ರೋತ್ಸಾಹಿಸಲಾಗುತ್ತಿದೆ. ಜಿಲ್ಲೆಗಳಲ್ಲಿ ವೆಂಡಾರ್ ಡೆವಲಪ್‌ಮೆಂಟ್ ಪ್ರೋಗ್ರಾಂ, ಕೈಗಾರಿಕಾ ವಸ್ತುಪ್ರದರ್ಶನ, ಕೊಡು–ಕೊಳ್ಳುವವರ ಸಭೆಗಳನ್ನು ಹಮ್ಮಿಕೊಳ್ಳುವ ಮೂಲಕ ಸಣ್ಣ ಕೈಗಾರಿಕೆಗಳ ಉತ್ಪನ್ನಗಳ ಮಾರುಕಟ್ಟೆಗೆ ಸೌಲಭ್ಯ ಕಲ್ಪಿಸಲಾಗುತ್ತಿದೆ.

ಉ) ಹೌದು.

ಊ) ರಾಜ್ಯ ಸರ್ಕಾರವು ರೋಗಗ್ರಸ್ಥ ಸಣ್ಣ ಕೈಗಾರಿಕೆಗಳ ಪುನಃಶ್ಚೇತನಕ್ಕಾಗಿ ಈ ಕೆಳಕಂಡಂತೆ ಹಲವು ರಿಯಾಯಿತಿ ಮತ್ತು ಸವಲತ್ತುಗಳನ್ನು ಕಲ್ಪಿಸಿದೆ.

1. ಘಟಕದ ಪುನಃಶ್ಚೇತನ ಯೋಜನಾ ವೆಚ್ಚದ ಶೇ. 25 ರಷ್ಟು ರೂ. 2.50 ಲಕ್ಷಗಳಿಗೆ ಮಿತಿಗೊಳಪಟ್ಟು ಬಡ್ಡಿರಹಿತ ಬೀಜ ಧನವನ್ನು (National Equity Fund Scheme ಮಾರ್ಗ ಸೂಚಿಯನ್ವಯ) ಸಾಲದ ರೂಪದಲ್ಲಿ ಒದಗಿಸುವುದು; ಪುನಃಶ್ಚೇತನ ಯೋಜನಾ ವೆಚ್ಚವು ರೂ.40.00 ಲಕ್ಷ ಮೀರುವಂತಿಲ್ಲ ಮತ್ತು ಪ್ರವರ್ತಕರ ವಂತಿಗೆ ಯೋಜನಾ ವೆಚ್ಚದ ಶೇ. 10 ರಷ್ಟು ಆಗಿರುತ್ತದೆ.
2. ಕೆಐಎಡಿಬಿ/ಕೆಎಸ್ಎಸ್ ಐಡಿಸಿ ಮತ್ತು ಕಿಯೋನಿಕ್ಸ್‌ಗಳ ಬಾಕಿ ಸಾಲ ಪಾವತಿಯನ್ನು ಒಂದು ವರ್ಷ ಋಣಸ್ಥಗಿತ ದೊಂದಿಗೆ ಮುಂದೂಡಿ ಅದನ್ನು ನಾಲ್ಕು ವಾರ್ಷಿಕ ಕಂತುಗಳಲ್ಲಿ ಬಡ್ಡಿರಹಿತವಾಗಿ ಪಾವತಿಸಲು ಅವಕಾಶ.
3. ಅಭಿವೃದ್ಧಿ ಸಾಲ ಮರುಪಾವತಿಯನ್ನು ಕೈಗಾರಿಕೆಯು ಪುನಃಶ್ಚೇತನಗೊಳಿಸಿದ ನಂತರ ಮೂರು ವರ್ಷದ ಅವಧಿಯಲ್ಲಿ ಬಡ್ಡಿ ಇಲ್ಲದೇ ಪಾವತಿಸಲು ಅವಕಾಶ.
4. ತೆರಿಗೆ ಸಂಬಂಧಿತ ಸೌಲಭ್ಯಗಳು: ತೆರಿಗೆ ಬಾಕಿಯನ್ನು 6 ಅರ್ಧ ವಾರ್ಷಿಕ ಕಂತುಗಳಲ್ಲಿ ಪ್ರತಿ ತಿಂಗಳಿಗೆ ಶೇ.1/2 ರಂತೆ ಬಡ್ಡಿ ಸಹಿತ ಮರುಪಾವತಿ ಹಾಗೂ ಮುಂದಿನ ಮೂರು ವರ್ಷಗಳಲ್ಲಿ ಪಾವತಿಸುವ ಮಾಹೆಯ ತೆರಿಗೆಯಲ್ಲಿ ಶೇ.50 ರಷ್ಟು ಬಡ್ಡಿರಹಿತವಾಗಿ ಮುಂದೂಡಿ ನಂತರ 3 ವಾರ್ಷಿಕ ಕಂತುಗಳಲ್ಲಿ ಆಯಾ ಸಾಲಿನ ತೆರಿಗೆ ಜೊತೆಯಲ್ಲಿ ಮರುಪಾವತಿ ಮಾಡಲು ಅವಕಾಶ ನೀಡಲಾಗಿದೆ ಮತ್ತು ಘಟಕವು ಮುಚ್ಚಿರುವ ಅವಧಿಗೆ ಬಡ್ಡಿಯನ್ನು ವಿಧಿಸುವಂತಿಲ್ಲ.